**Office of the Principal Director,**
**Karnataka State Audit and Accounts Department,**
**T.T.M.C Building,**
**3rd floor, A Block, BMTC Shanthinagara,**
**Bengaluru-560 027.**
**Phone No:- 080- 22215273**
**Fax No.:- 080- 22216500**
**E-mail:** controllerstateaccounts@yahoo.com

ಪ್ರಧಾನ ನಿರ್ದೇಶಕರ ಕಚೇರಿ,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,
ಟಿ.ಟಿ.ಎಂ.ಸಿ ಕಟ್ಟಡ,
3ನೇ ಮಹಡಿ, ಎ ಬ್ಲಾಕ್, ಬಿಎಂಟಿಸಿ ಶಾಂತಿನಗರ,
ಬೆಂಗಳೂರು-560 027.
ದೂರವಾಣಿ ಸಂಖ್ಯೆ:- 080- 22215273
ಫ್ಯಾಕ್ಸ್ ಸಂಖ್ಯೆ:- 080- 22216500
ಇ-ಮೇಲ್: controllerstateaccounts@yahoo.com

ಸಂಖ್ಯೆ: ರಾಲೆಪ 01 ಸಿದ್ವಿಬ 2017 (ಕಿಬಕ) /2933 — ದಿನಾಂಕ: 05.01.2023.

## ::ಸುತ್ತೋಲೆ::

ವಿಷಯ: ಕನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಗ್ರೂಪ್ ಡಿ ನೌಕರರಿಗೆ ಗ್ರೂಪ್ ಸಿ ವೃಂದದ ಕಿರಿಯ ಲೆಕ್ಕ ಸಹಾಯಕರ ಹುದ್ದೆಗೆ ಮುಂಬಡ್ತಿ ನೀಡುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/02/ಸೆಹಿಮು/2022, ದಿನಾಂಕ: 28.12.2022.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ/240/ಸೇನೆನಿ/2022, ದಿನಾಂಕ: 31.12.2022.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ ಉಲ್ಲೇಖ(1) ಸರ್ಕಾರದ ಆದೇಶ ಹಾಗೂ ಉಲ್ಲೇಖ(2) ಸರ್ಕಾರದ ಸುತ್ತೋಲೆಯಲ್ಲಿನ ನಿರ್ದೇಶನಗಳನುಸಾರ ಇಲಾಖೆಯ ಗ್ರೂಪ್ ಡಿ ನೌಕರರುಗಳಿಗೆ ಗ್ರೂಪ್ 'ಸಿ' ವೃಂದದ ಕಿರಿಯ ಲೆಕ್ಕ ಸಹಾಯಕರ ಹುದ್ದೆಗೆ ಮುಂಬಡ್ತಿ ಹೊಂದಲು ಈ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿರುವಂತೆ ಗ್ರೂಪ್ ಡಿ ಹುದ್ದೆಯಲ್ಲಿ 07 ವರ್ಷಗಳನ್ನು ಪೂರ್ಣಗೊಳಿಸಿ ಈ ಕೆಳಕಂಡ ತರಬೇತಿ ಹಾಗೂ ಅರ್ಹತೆಯನ್ನು ಪೂರೈಸಿರುವ ಅರ್ಹ ನೌಕರರುಗಳು ಈ ಕೆಳಕಂಡ ದಾಖಲೆಗಳನ್ನು ಕೇಂದ್ರ ಕಛೇರಿಗೆ 15 ದಿನಗಳೊಳಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

1. ಕರ್ನಾಟಕ ನಾಗರೀಕ ಸೇವಾ (ಲಿಪಿಕ ಹುದ್ದೆಗಳ ನೇಮಕಾತಿ) (ತಿದ್ದುಪಡಿ)ನಿಯಮಗಳು 2013 ಜಾರಿಗೆ ಬರುವ ಪೂರ್ವದಲ್ಲಿ ಅಂದರೆ, ದಿನಾಂಕ: 13.12.2013 ಕ್ಕಿಂತ ಮೊದಲು ಸೇವೆಯಲ್ಲಿ ನೌಕರರು ಎಸ್.ಎಸ್.ಎಲ್.ಸಿ ಮೂಲ ಅಂಕಪಟ್ಟಿ ಹಾಗೂ ಕರ್ನಾಟಕ ನಾಗರೀಕ ಸೇವಾ (ಲಿಪಿಕ ಹುದ್ದೆಗಳ ನೇಮಕಾತಿ) (ತಿದ್ದುಪಡಿ) ನಿಯಮಗಳು 2013 ಜಾರಿಗೆ ಬಂದ ನಂತರ ಅಂದರೆ ದಿನಾಂಕ: 13.12.2013 ರ ನಂತರ ಗ್ರೂಪ್ ಡಿ ನೌಕರರ ವೃಂದದಲ್ಲಿ ಸೇವೆಗೆ ಸೇರಿದ ನೌಕರರು ಪಿಯುಸಿ (ವಾಣಿಜ್ಯ ಶಾಸ್ತ್ರ) ಮೂಲ ಅಂಕಪಟ್ಟಿ.
2. ಅಕೌಂಟ್ಸ್ ಲೋಯರ್ ಅಥವಾ ಅಕೌಂಟ್ಸ್ ಹೈಯರ್ ಇಲಾಖಾ ಪರೀಕ್ಷಾ ಮೂಲ ಪ್ರಮಾಣ ಪತ್ರ.
3. ಈ ಇಲಾಖೆಯಿಂದ ನಿಯೋಜಿಸಲಾದ ಪಂಚತಂತ್ರ, ಎಂ.ಎಸ್.ಆಫೀಸ್ ಮತ್ತು **E-Goverance Financials (FBAS) of Muncipalities** ತರಬೇತಿ ಪ್ರಮಾಣ ಪತ್ರದ ನೆರಳಚ್ಚು ದೃಢೀಕೃತ ಪ್ರತಿ.
4. ಕಛೇರಿ ಮುಖ್ಯಸ್ಥರಿಂದ ನೌಕರರು ತೃಪ್ತಿಕರವಾಗಿ ಸೇವೆ ಸಲ್ಲಿಸಿರುವ ಬಗ್ಗೆ ಸೇವಾ ದೃಢೀಕರಣ ಪ್ರಮಾಣ ಪತ್ರ.

ಪ್ರಧಾನ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ,
ಬೆಂಗಳೂರು.

<u>ಪ್ರತಿಯನ್ನು :</u>

1. ಅಪರ ನಿರ್ದೇಶಕರು, ಪ್ರಾಂತೀಯ ಕಛೇರಿ, ಬೆಂಗಳೂರು/ಮೈಸೂರು/ಕಲಬುರಗಿ/ಬೆಳಗಾವಿ
2. ಪ್ರಧಾನ ಮುಖ್ಯ ಲೆಕ್ಕಾಧಿಕಾರಿಗಳು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಆಲಮಟ್ಟಿ, ವಿಜಯಪುರ.
3. ಮುಖ್ಯ ಲೆಕ್ಕಾಧಿಕಾರಿಗಳು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಭೀಮರಾಯನಗುಡಿ
4. ಎಲ್ಲಾ ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲಗಳಿಗೆ.
5. ಈ ಇಲಾಖೆಯ ಎಲ್ಲಾ ಗ್ರೂಪ್ 'ಡಿ' ಸಿಬ್ಬಂದಿ ವರ್ಗದವರಿಗೆ.
6. ಸಿಸ್ಟಮ್ ಅನಾಲಿಸ್ಟ್ ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು.
7. ಕಛೇರಿ ಪ್ರತಿ.